ಇ) ಹೆಚ್ಚುವರಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಇದುವರೆಗೆ ನೇಮಕ ಮಾಡಿಕೊಂಡಿಲ್ಲ. ಮುಂದೆ ಹುದ್ದೆಗಳು ಖಾಲಿ ಆದಾಗ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ಈ) ವಿವರಗಳನ್ನು ಕೆಳಗೆ ನೀಡಲಾಗಿದೆ.

ಪರಿಶಿಷ್ಟ ಜಾತಿ 11+9 (ಬ್ಯಾಕ್‌ಲಾಗ್)	20
ಪರಿಶಿಷ್ಟ ಪಂಗಡ 3+3 (ಬ್ಯಾಕಲಾಗ್)	6
ಸಾಮಾನ್ಯ ಅರ್ಹತೆ	22
ಗ್ರೂಪ್ ಎ	4
ಗ್ರೂಪ್ ಬಿ	9
ಗ್ರೂಪ್ ಸಿ	11
ಗ್ರೂಪ್ ಡಿ	7
ಗ್ರೂಪ್ ಇ	3
ಮಾಜಿ ಸೈನಿಕರು	8
ಒಟ್ಟು	**90**

ಬೆಂಗಳೂರು ಕೆ.ಸಿ. ಜನರಲ್ ಆಸ್ಪತ್ರೆಗೆ ರೋಗಿಗಳ ಸಂಖ್ಯೆ

732 - ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಗೆ ದಿನನಿತ್ಯ ಬರುತ್ತಿರುವ ಹೊರರೋಗಿಗಳ ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ ಅವರುಗಳ ಚಿಕಿತ್ಸೆಯ ತಪಾಸಣೆಗಾಗಿ ಅಲ್ಲಿ ಸ್ಥಳಾವಕಾಶವಿಲ್ಲದಿರುವುದು ನಿಜವೆ?

ಇ) ಇಲ್ಲದೆ ಇದ್ದಲ್ಲಿ ಸ್ಥಳಾವಕಾಶದ ವ್ಯವಸ್ಥೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಹೊರರೋಗಿಗಳ ಸಂಖ್ಯೆ ದಿನಕ್ಕೆ ಸುಮಾರು 800 ರಿಂದ 1000 ಮತ್ತು ಒಳರೋಗಿಗಳ ಸಂಖ್ಯೆ 65 ರಿಂದ 70.

ಆ) ಸ್ವಲ್ಪ ಮಟ್ಟಿಗೆ ಇಕ್ಕಟ್ಟು ಉಂಟಾಗುತ್ತದೆ.

ಇ) ಹೆಚ್ಚಿನ ಸ್ಥಳಾವಕಾಶ ವ್ಯವಸ್ಥೆ ಮಾಡುವ ಬಗ್ಗೆ ಬೇರೆ ಬೇರೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.